ದೇವರ ದಾಸಿಮಯ್ಯನ ಮಾರ್ಗ ಹಿಡಿದ, ಮಾದಾರ ಚನ್ನಯ್ಯನ ಭುಜಗಳನ್ನು ನೆಮ್ಮಿದ, ಅಲ್ಲಮನ ಕೈ ಹಿಡಿದ ಬಸವನ ಪರಿ, ಶರಣ ಸಂದೋಹದ ನಡುವೆ ಯಾವ್ಯಾವ ಸ್ವರೂಪದಲ್ಲಿದ್ದಿತೋ ಯಾವ್ಯಾವ ಸಮಸ್ಯೆಗಳನ್ನು ತಂದೊಡ್ಡಿತೋ ಅದು ಊಹಿಸಲರಿದು. ಹಾಗಾಗಿಯೇ ಬಸವಣ್ಣನ ಬದುಕನ್ನು, ಅಲ್ಲಮನ ಹೆಜ್ಜೆ ಗುರುತುಗಳನ್ನು ಯಾವುದೇ ಸಂಶೋಧನೆಗಳು, ಸೃಜನಶೀಲ ಕೃತಿಗಳು ಹಿಡಿಯಲಾಗದೆ ಇನ್ನೂ ಅದರದೇ ಪ್ರಯತ್ನದಲ್ಲಿವೆ. ಇದೆಲ್ಲದರ ಗೊಂದಲವನ್ನು ಬಿಟ್ಟು ಚಾಮರಸನಂಥ ಕವಿಗಳು ತಮ್ಮ ಕೃತಿಗಳಲ್ಲಿ ಕಾಣಿಸಿಕೊಳ್ಳುವ ಶರಣರೆಲ್ಲರನ್ನೂ ಲೀಲೆಗಾರರನ್ನಾಗಿ ಮಾಡಿದರು. ಇಷ್ಟಾಗಿಯೂ ಸಹ ಈ ಪ್ರಸಂಗಗಳು ಅರ್ಥ ಕಳೆದುಕೊಳ್ಳುವುದಿಲ್ಲ. ಅವೂ ಕೂಡ ನಮ್ಮ ಜನ ಸಮೂಹ ಮೆಚ್ಚಿದ ಮತ್ತು ಗೌರವಿಸಿ ಓದುತ್ತ ಬಂದ ಪಠ್ಯಗಳೇ.

ಚಾಮರಸನ ಕಾವ್ಯದಲ್ಲಿ ಕಾಣಿಸಿಕೊಳ್ಳುವ ಅಲ್ಲಮ ತನ್ನೆದುರು ಬಂದವರನ್ನೆಲ್ಲ ಪ್ರಶ್ನಿಸುವ, ಅವರಿಂದ ಉತ್ತರ ಪಡೆದುಕೊಳ್ಳುವ ಪರಿ ಅನನ್ಯ ರೀತಿಯಲ್ಲಿ ಚಿತ್ರಣಗೊಳ್ಳುತ್ತದೆ. ಅಲ್ಲಮ–ಅಕ್ಕಮಹಾದೇವಿಯ ಸಂಭಾಷಣೆ, ಅಲ್ಲಮ–ಮುಕ್ತಾಯಕ್ಕರ ನಡುವೆ ನಡೆಯುವ ಸಾವಿನ ಮತ್ತು ಅಧ್ಯಾತ್ಮ ಚಿಂತನೆ, ಬಸವಣ್ಣನಿಗೆ ಅಲ್ಲಮ ಮರುಳ ಶಂಕರದೇವನ ಲೋಕಾತೀತ ಸರಳ, ಗುಪ್ತ ಭಕ್ತಿ ಮತ್ತು ಶರಣತ್ವದ ತುತ್ತತುದಿಯ ಬದುಕನ್ನು ಪರಿಚಯಿಸುವುದು, ಗೋರಕ್ಷನ ದೇಹ ಸಂರಕ್ಷಣೆಯ ವ್ಯರ್ಥ ಶಕ್ತಿಯನ್ನು ನಶ್ವರವೆಂಬಂತೆ ತೋರಿಸುವುದು ಇವೆಲ್ಲವೂ ಅಲ್ಲಮನ ಶರಣತ್ವದ ನಿಜದ ಅರಿವು.

ಭಾರತ ಕಥಾಮಂಜರಿಯಲ್ಲಿ ಕುಮಾರವ್ಯಾಸನ ನಿಜನಾಮಧೇಯ, ಜಾತಿ, ಕುಲಗೋತ್ರ ಹೇಗೆ ಎಲ್ಲಿಯೂ ಕಾಣಿಸಿಕೊಳ್ಳುವುದಿಲ್ಲವೋ ಹಾಗೆಯೇ ಪ್ರಭುಲಿಂಗಲೀಲೆಯಲ್ಲೂ ಚಾಮರಸನ ಮೂಲಚೂಲ ಕಾಣಿಸಿಕೊಳ್ಳುವುದಿಲ್ಲ. ಇವರು ವಿರಕ್ತ, ಭಕ್ತ ಕವಿಗಳಾದ್ದರಿಂದ ಇವರ ಬರೆಹ ಕೈಂಕರ್ಯದಲ್ಲಿ ಅವರವರ ವ್ಯಕ್ತಿತ್ವಗಳು ನಂಬಿದ ದೈವಶಕ್ತಿಗಳಿಗೇ ಸಮರ್ಪಣೆಯಾಗಿಬಿಟ್ಟಿರುತ್ತದೆ. ಚಾಮರಸನ ನಂತರ ಬಂದ ಗುರುರಾಜ ಚಾರಿತ್ರ್ಯ ಕಾವ್ಯ, ಪ್ರಭುದೇವರ ಸಾಂಗತ್ಯ, ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರ ಈ ಗ್ರಂಥಗಳಲ್ಲೆಲ್ಲ ಚಾಮರಸ ಹಾಗೂ ಅವನ ಕೃತಿಯ ಪ್ರಸ್ತಾಪವಿದೆ. ಕಥಾಸೂತ್ರ ರತ್ನಾಕರ ಕೃತಿಯಲ್ಲಿ ಚಾಮರಸನು ವಿಜಯನಗರದ ಎರಡನೇ ಪ್ರೌಢದೇವರಾಯನ ಆಸ್ಥಾನದಲ್ಲಿದ್ದವನೆಂದು ತಿಳಿದುಬರುತ್ತದೆ. ಪ್ರಭುಲಿಂಗಲೀಲೆಯು ಸಾವಿರದ ನೂರ ಹನ್ನೊಂದು ಭಾಮಿನಿ ಷಟ್ಪದಿಗಳಿಂದ ಕೂಡಿದ್ದು, ಕುಮಾರವ್ಯಾಸನ ಭಾರತ ಕಥಾಮಂಜರಿಯ ಪದ್ಯಗಳ ನಡುವೆ ಅಲ್ಲಲ್ಲಿ ಕಾಣಿಸಿಕೊಳ್ಳುವ ಅಧ್ಯಾತ್ಮಶಕ್ತಿಯ ಸಾಲುಗಳು ಪ್ರಭುಲಿಂಗಲೀಲೆಯಲ್ಲಿ ಕಾವ್ಯದಾದ್ಯಂತ ಹಾಸುಹೊಕ್ಕಾಗಿರುತ್ತದೆ. ಯಾಕೆಂದರೆ, ಕೃತಿಯಲ್ಲಿ ಕಾಣಿಸಿಕೊಳ್ಳುವ ಎಲ್ಲರೂ ಶರಣರು, ಸಾಧಕರು.

ಪ್ರಭುಲಿಂಗಲೀಲೆಯು ಸಂಸ್ಕೃತ, ಮರಾಠಿ, ತಮಿಳು, ತೆಲುಗು ಭಾಷೆಗೆ ಅನುವಾದಗೊಂಡಿದೆ. ತೆಲುಗಿನಲ್ಲಿ ಪಿಡುಪರ್ತಿ ಸೋಮನಾಥ ಹಾಗೂ ಬಸವ ಕವಿ ಭಾಷಾಂತರಿಸಿದ್ದು, ತಮಿಳಿನಲ್ಲಿ ತಿರುವಣ್ಣಾಮಲೈ ಶಿವಪ್ರಕಾಶಸ್ವಾಮಿ, ಮರಾಠಿಯಲ್ಲಿ ಬ್ರಹ್ಮದಾಸ 'ಲೀಲಾ ವಿಶ್ವಂಬರ' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಪ್ರಭುಲಿಂಗಲೀಲೆ ಯಾವ ಭಾಷೆಗೆ ಬೇಕಾದರೂ ಸುಲಭವಾಗಿ ಭಾಷಾಂತರಿಸಬಹುದಾದ ಕೃತಿ.

★★★

ತನ್ನ ತಾನು ಅರಿತು, ನಂಬಿದ ಗುಹೇಶ್ವರನನ್ನೇ 'ನಾ ದೇವನಲ್ಲದೆ ನೀ ದೇವನೇ' ಅಂದು ಕಿಂಚಿತ್ ಆಗಿಸಿ, ಆರೂಢ ಮಾತ್ರವಲ್ಲ ಯಾವುದೇ ಪಟ್ಟವನ್ನು ಕಳೆದು, ಗುರುಸ್ಥಾನವನ್ನು ಇಲ್ಲವಾಗಿಸಿ, ಮಹಾ ಅರಿವಿನ ಮಾರ್ಗದಲ್ಲಿ ಬಹುದೀರ್ಘ ಪ್ರಯಾಣ ಕೈಗೊಂಡ ಅಲ್ಲಮನ ಹೆಜ್ಜೆ ಗುರುತುಗಳನ್ನು, ಅವನ ಹಿರಿಮೆಯನ್ನು ಅರಿಯುವುದು ಕಷ್ಟವೇ! ಅವನ ಹುಟ್ಟು ಸಾವಿನ ಎಡೆ ಯಾವುದೆಂಬುದು ಯಃಕಶ್ಚಿತ್